

ಚಾಣಕ್ಯ ವಿಶ್ವವಿದ್ಯಾಲಯ

# ತಂಬೆಲರ

ತ್ರೈಮಾಸಿಕ ಪತ್ರಿಕೆ - ಕಾರ್ತಿಕ ಮಾಸ

ಮೊದಲ ಸಂಚಿಕೆ

## ಸಂಪಾದಕೀಯ ಬಳಗ

**ಮಾರ್ಗದರ್ಶನ**
ಕೇಶವಚಂದ್ರ
ಚಂದನ ಭಟ್ ಕೋಣೆಮನೆ

**ಶೀರ್ಷಿಕೆ ವಿನ್ಯಾಸ**
ಮಂಜುಪ್ರಸಾದ್ ಮೈಸೂರು

**ಸಂಪಾದಕರು**
ಶರಣ್ಯ
ಶಮಿತಾ
ಅನ್ವಿತ ಡಿ ಎನ್
ಸುಶ್ಮಿತಾ ಬಿ ಆರ್


**ತರಣಿದರ್ಶನಕಿಂತ ಕಿರಣಾನುಭವ**
**ಸುಲಭ । ಪರಮಶಾಸ್ತ್ರಕ್ಕಿಂತ**
**ಸರಿಯುದಾಹರಣೆ ॥**
**ಪರಮತತ್ತ್ವವ ಕಂಡ**
**ಗುರುವನರಸುವುದೆಲ್ಲಿ? ।**
**ದೊರೆತಂದು ನೀಂ ಧನ್ಯ–**
**ಮಂಕುತಿಮ್ಮ ॥**

ಸೂರ್ಯನನ್ನು ನೋಡುವುದಕ್ಕಿಂತ ಅವನ ಕಿರಣಗಳಿಂದ ಹೊರಸೂಸುವ ಬೆಳಕು ಸಹನೀಯ. ಅತ್ಯುತ್ತಮ ಶಾಸ್ತ್ರಗಳನ್ನು ಅರಿಯುವುದಕ್ಕಿಂತ ಅದರ ಸಾರವನ್ನು ಉದಾಹರಣೆಯಾಗಿ ನೋಡಿದರೆ ಅರ್ಥವಾಗುವುದು ಸುಲಭ. ಹಾಗೆ ಪರತತ್ವವನ್ನು ಅರಿತ ಗುರುವನ್ನು ಅರಸುವುದು ಎಲ್ಲಿ? ಅಂತಹ ಗುರು ದೊರೆತ ದಿನ ನೀನು ಧನ್ಯ, ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸೂರ್ಯನನ್ನು ನೋಡಿದರೆ ಕಣ್ಣು ಕುಕ್ಕುತ್ತದೆ. ಹಾಗೆ ನೋಡಲು ಕ್ಷಮತೆ ಬೇಕು. ಆದರೆ ಸೂರ್ಯನ ಕಿರಣಗಳು ಹೊರಸೂಸುವ ಬೆಳಕು ನಮಗೆ ಬಹಳ ಹಿತವಲ್ಲವೆ? ಹಾಗೆಯೇ ಯಾವುದಾದರೂ ವಿಚಾರವನ್ನು ಕೈಗೆತ್ತಿಕೊಂಡಾಗ, ಅದನ್ನು ಪ್ರತಿಪಾದಿಸುವ ಶಾಸ್ತ್ರದ ಮೂಲವನ್ನು ಹುಡುಕಿ ಅದನ್ನು ಅರ್ಥೈಸಿಕೊಂಡು ಅನುಸಂಧಾನಮಾಡುವುದು ಸುಲಭ ಮಾರ್ಗವಲ್ಲ. ಆದರೆ ಅದನ್ನು ಓದಿ ಅನುಸಂಧಾನ ಮಾಡಿಕೊಂಡವರ ಉದಾಹರಣೆ ಅಥವಾ ಅವರು ನೀಡುವ ಉದಾಹರಣೆಯಿಂದ ಆ ಶಾಸ್ತ್ರದ ಹಿಂದಿರುವ ತತ್ವವನ್ನು ಅರ್ಥಮಾಡಿಕೊಳ್ಳುವುದು ಸುಲಭ. ಆದರೆ ನಮಗೆ ಹಾಗೆ ಶಾಸ್ತ್ರವನ್ನು ಸರಿ ರೀತಿಯಲ್ಲಿ ಅರ್ಥಮಾಡಿಕೊಂಡು ಅದನ್ನು ಹಾಗೆ ನಮಗೆ ಭೋಧಿಸುವ ಗುರು ಸಿಗಬೇಕಲ್ಲ!

# ಅನಾಥನಿಗೆ ಅಪ್ಪನ ಅಂಕಿತ

**ಕತೆ**

ಕಳೆದ ಹಲವಾರು ವರ್ಷಗಳಿಂದ ಬಡತನದ ಒತ್ತಡದಲ್ಲಿ ಜೀವನ ನಡೆಸುತ್ತಿದ್ದ ಶಂಕರನು, ಅತ್ಯಂತ ಸ್ನೇಹಪರ ಹಾಗೂ ದಯಾಳು ಸ್ವಭಾವದವನಾಗಿದ್ದ. ದಿನದಿಂದ ದಿನಕ್ಕೆ ಶ್ರಮಿಸುತ್ತಾ, ಜೀವನವನ್ನು ಬಡತನದ ನಡುವೆ ಸಾಗಿಸುತ್ತಿದ್ದರೂ ಅವನು ಹಣವನ್ನು ಮಹತ್ತಾಗಿ ಪರಿಗಣಿಸುತ್ತಿರಲಿಲ್ಲ.

ಮಳೆಯು ಸಮುದ್ರದಂತಹ ತೀವ್ರತೆಯಿಂದ ಸುರಿಯುತ್ತಿದ್ದುದು, ವಜ್ರದಂತೆಯೇ ಗುಡುಗುತಿದ್ದ ಗಗನ, ಊರಿನಲ್ಲಿ ಗೊಂದಲವನ್ನು ಹುಟ್ಟಿಸಿದ್ದ ಆ ರಾತ್ರಿ, ಶಂಕರನು ಕೆಲಸ ಮುಗಿಸಿ ಅವನ ಊರಿಗೆ ವಾಪಸ್ಸಾಗುತ್ತಿದ್ದಾಗ ಆಕಸ್ಮಿಕವಾಗಿ ರಸ್ತೆಯ ಮೇಲೆ ಬಿದ್ದೊಂದು ಮಗುವಿನ ಅಳುವಿನ ಶಬ್ದವು ಅವನ ಕಿವಿಗೆ ಕೇಳಿಸುತ್ತದೆ. ಬಡತನದ ನಡುವೆಯೂ ಕರುಣೆಯ ಮೂಲಕ ತನ್ನ ಜೀವನ ಸಾಗಿಸುತ್ತಿದ್ದ ಶಂಕರನಿಗೆ ಆ ಮಗುವು



ತನ್ನಂತೆಯೇ ಬೇರೆಯವರಿಂದ ಬಿಟ್ಟುಹೋಗಿರುವ ಅನಾಥ ಮಗುವಿನಂತೆ ತೋರಿತು. ಅವನು ಆ ಮಗುವನ್ನು ಎತ್ತಿಕೊಂಡು ಮನೆಗೆ ಕರೆದುಕೊಂಡು ಹೋಗಿ, "ನೀನೇ ನನ್ನ ಮಗ," ಎಂದು ಹೇಳುತ್ತಾನೆ. ಮಗುವಿಗೆ ರಾಮ ಎಂದು ಹೆಸರು ಇಟ್ಟು, ತನ್ನ ಶ್ರಮವನ್ನೆಲ್ಲಾ ರಾಮನ ವಿದ್ಯಾಭ್ಯಾಸ ಮತ್ತು ಸುಧಾರಣೆಗೆ ಮುಡಿಪಾಗಿಸುತ್ತಾನೆ. ದಿನದಿಂದ ದಿನಕ್ಕೆ ರಾಮನು ದೊಡ್ಡವನಾಗಿ, ಉತ್ತಮ ಶಿಕ್ಷಣ ಪಡೆದು, ಒಳ್ಳೆಯ ಕೆಲಸವನ್ನು ಪಡೆದು ಸಮಾಜದಲ್ಲಿ ಉತ್ತಮ ಸ್ಥಾನ ಪಡೆಯುತ್ತಾನೆ.

ಆದರೆ, ರಾಮನ ಯಶಸ್ಸಿನೊಂದಿಗೆ ಅವನ ಅಹಂಕಾರ ಕೂಡ ಬೆಳೆಯುತ್ತಿತ್ತು. ಬಡತನದಲ್ಲಿದ್ದ ಶಂಕರನನ್ನು ಕಾಣುವುದು ಅವನಿಗೆ ನಾಚಿಕೆಯ ಸಂಗತಿಯಾಗಲು ಶುರುವಾಯಿತು. ಒಂದು ದಿನ, ಅವನ ಅಹಂಕಾರದ ಜ್ವಾಲೆಯು ತೀವ್ರವಾಗಿ ಸಿಡಿದು ಶಂಕರನಿಗೆ ನೋವು ಉಂಟುಮಾಡಿತು. "ನೀನು ನನ್ನ ತಂದೆಯಲ್ಲ, ನನಗೆ ಇನ್ನು ನಿನ್ನ ಜೊತೆ ಇರಲು ಆಗೋದಿಲ್ಲ," ಎಂದು ಶಂಕರನನ್ನು ತಿರಸ್ಕರಿಸುತ್ತಾನೆ. ರಾಮನ ಮಾತು ಶಂಕರನ ಹೃದಯಕ್ಕೆ ತೀವ್ರವಾದ ನೋವು ತರುತ್ತದೆ. ಆದರೆ ಶಂಕರನು ಮಗನ ಯೋಗಕ್ಷೇಮಕ್ಕಾಗಿ ತಾನೇ ದೂರ ಹೋಗುವ ನಿರ್ಧಾರ ತೆಗೆದುಕೊಳ್ಳುತ್ತಾನೆ.

ಕಾಲ ಕಳೆದ ಬಳಿಕ, ಶಂಕರನ ಹಳೆಯ ಸ್ನೇಹಿತನು ಆಕಸ್ಮಿಕವಾಗಿ ರಾಮನನ್ನು ಭೇಟಿಯಾಗುತ್ತಾನೆ, ಆಗ ನಡೆದ ವಿಷಯವನ್ನು ರಾಮ ಶಂಕರನ ಸ್ನೇಹಿತನಿಗೆ ತಿಳಿಸಿದ(ಅವನ ಮಾತಿನಲ್ಲಿ ಪಶ್ಚಾತ್ತಾಪದ ಬಾವನೆ ಕೂಡ ಇರಲಿಲ್ಲ) ಶಂಕರನ ಸ್ನೇಹಿತನಿಗೆ ತುಂಬಾ ಬೇಜಾರಾಗಿ, ರಾಮನಿಗೆ ಅವನ ಜನ್ಮರಹಸ್ಯವನ್ನು ವಿವರಿಸುತ್ತಾನೆ. ಸತ್ಯವನ್ನು ಅರಿತಾಗ, ಅವನ ಅಂತರಂಗದಲ್ಲಿ ನೋವು ಮತ್ತು ಪಶ್ಚಾತ್ತಾಪದ ಭಾವನೆಗಳು ಅಲೆಗಳಂತೆ ಏರಲು ಶುರುವಾಗುತ್ತವೆ. ತನ್ನ ಅಹಂಕಾರದ ಪರಿಣಾಮವಾಗಿ ತಂದೆಗೆ ತೊಂದರೆ ಉಂಟುಮಾಡಿರುವ ಬಗೆಯ ಅರಿವಾಗಿ, ರಾಮನು ಶಂಕರನನ್ನು ಹುಡುಕಲು ನಿರ್ಧರಿಸುತ್ತಾನೆ. ಆದರೆ ಶಂಕರನ ಸುಳಿವು ಸಿಗಲಿಲ್ಲ. ಕೊನೆಗೆ ಶಂಕರನ ಸ್ಥಳವನ್ನು ಹುಡುಕಿ ತಲುಪಿದಾಗ, ಶಂಕರನು ತನ್ನ ಕೊನೆಯ ಉಸಿರು ಬಿಟ್ಟಾಗಿತ್ತು. ಶಂಕರನ ಶವದ ಮುಂದೆ ಬಿದ್ದು "ಅಪ್ಪಾ, ನನ್ನನು ಕ್ಷಮಿಸು" ಎಂದು ರಾಮನು ಅಳುತ್ತಾನೆ. ನಂತರ ದುಃಖದಿಂದಲೇ ತಂದೆಯ ಕಾರ್ಯವನ್ನು ಪೂರ್ಣಗೊಳಿಸುತ್ತಾನೆ. ಆದರೂ ಅವನ ಮನಸ್ಸಿಗೆ ಸಮಾಧಾನ ಸಿಗಲಿಲ್ಲ. ಹಾಗಾಗಿ ಶಂಕರನ ಪ್ರೀತಿಯ ಜಾಡನ್ನು ಹುಡುಕುತ್ತಾ, ಅವನ ನೆನಪಿನಲ್ಲಿ ಒಂದು ಅನಾಥ ಮಗುವನ್ನು ದತ್ತು ತೆಗೆದುಕೊಂಡು ಆ ಮಗುವಿಗೆ ಶಂಕರ ಎಂದು ಹೆಸರಿಟ್ಟು, ಒಳ್ಳೆಯ ಶಿಕ್ಷಣ ನೀಡಿ, ಸಮಾಜಕ್ಕೆ ಉತ್ತಮ ಪ್ರಜೆಯನ್ನಾಗಿ ಮಾಡಿದ.

"ಈ ಕಥೆಯಲ್ಲಿ ಶಂಕರನು ತನ್ನ ಒಲವಿನಿಂದ ತನ್ನ ಮಗನಿಗೆ ಮಾತ್ರವಲ್ಲ, ಇಡೀ ಸಮಾಜಕ್ಕೆ ಉತ್ತಮ ಪಾಠವನ್ನು ಕಲಿಸಿದ್ದಾನೆ."

**ತುಳಸಿ ಶೆಟ್ಟಿ**
ತೃತೀಯ ಬಿಸಿಏ

## ತಿಳಿ ಕನ್ನಡದ ಕಡಲು!




ಸಂಸ್ಕೃತ ಮಹಾಭಾರತದಲ್ಲಿ "ಕರ್ನಾಟ" ದೇಶದ ಉಲ್ಲೇಖವಿದೆ.

ಕ್ರಿ.ಶ. ೨ನೇ ಶತಮಾನದ ಗ್ರೀಕ್ ಪ್ರಹಸನದಲ್ಲಿ ಮತ್ತು ಶಾತವಾಹನ ದೊರೆ ಹಾಲನ "ಗಾಥಾ ಸಪ್ತಶತಿ"ಯಲ್ಲಿ ಕನ್ನಡ ಪದಗಳಿವೆ.

# ಪುಸ್ತಕಗಳಿಂದ ನಾ ಕಂಡ ಜಗತ್ತು

ಕನ್ನಡ ಭಾಷೆ ಉಳಿಯೋದು ಕಥೆ ಕಾದಂಬರಿಗಳಿಂದ ಅಲ್ಲ. ಅದು ಉಳಿಯೋದು ಜನರ ಬಳಕೆಯಿಂದ."ಎಂಬಂತಹ ಮಾತನ್ನು ಹೇಳಿದ ಸಾಹಿತಿ, ಪರಿಸರವಾದಿ, ಪಕ್ಷಿಪ್ರೇಮಿ, ಛಾಯಾಗ್ರಾಹಕ, ಬಹುಮುಖ ಪ್ರತಿಭೆಯಾದಂತಹ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಪ್ರಸಿದ್ಧ ಕಾದಂಬರಿಗಳಲ್ಲೊಂದಾದ "ಕರ್ವಾಲೋ "ನನ್ನ ನೆಚ್ಚಿನ ಪುಸ್ತಕ.




ಕರ್ವಾಲೋ ಎಂದು ಮೊದಲು ನಾನು ಕೇಳಿದಾಗ ನನ್ನ ಕಲ್ಪನೆಯಲ್ಲಿ ಎಷ್ಟೋ ವಿಚಿತ್ರವಾದ ಯೋಚನೆಗಳು ಮೂಡಿದ್ದವು . ಕರ್ವಾಲೋ ಎಂದರೆ ಯಾವುದೋ ಹಳೇ ಕಾಲದ ಕೋಟೆ ಇರಬಹುದು ,ದೆವ್ವ ಭೂತದ ಕಥೆಯಾಗಿರಬಹುದು ಎಂದೆಲ್ಲ ಯೋಚಿಸಿದ್ದೆ. ಆದರೆ ನನ್ನ ಕಲ್ಪನೆ ಈ ಕಾದಂಬರಿಯ ಕಥೆಗೆ ಅತ್ಯಂತ ವ್ಯತಿರಿಕ್ತವಾಗಿತ್ತು,ಏಕೆಂದರೆ ಕರ್ವಾಲೋ ಎಂದರೆ ನಾನೆಂದೂ ಕೇಳಿರದ ಒಬ್ಬ ವಿಜ್ಞಾನಿಯ ಹೆಸರು. ಕರ್ವಾಲೋ ಕಾದಂಬರಿಯಲ್ಲಿ ತೇಜಸ್ವಿಯವರು ನಮ್ಮ ಪರಿಸರದಲ್ಲಿರುವ ವೈವಿಧ್ಯತೆಯ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

ಈ ಕಾದಂಬರಿಯು ಮೂಡಿಗೆರೆಯಲ್ಲಿ ನಡೆದಿರುವಂತಹ ಘಟನೆಗಳನ್ನು ಒಳಗೊಂಡಿದೆ. ಈ ಕಾದಂಬರಿಯ ಇನ್ನೊಂದು ವಿಶೇಷತೆ ಎಂದರೆ ತೇಜಸ್ವಿಯವರೂ ಈ ಕಾದಂಬರಿಯಲ್ಲಿ ಒಬ್ಬ ಪಾತ್ರದಾರ. ತೇಜಸ್ವಿ ಅವರಿಗೆ ಮೂಡಿಗೆರೆಯ ಜೇನು ಸೊಸೈಟಿಯಲ್ಲಿ ಪರಿಚಯವಾದಂತಹ ಮಂದಣ್ಣನ ಮೂಲಕ ಪರಿಚಯವಾಗುವ ವಿಜ್ಞಾನಿಯೇ "ಕರ್ವಾಲೋ". ಮಂದಣ್ಣನು ದಡ್ಡನಂತೆ ಕಂಡರೂ ಆತನಿಗಿದ್ದ ಪ್ರಕೃತಿಯಲ್ಲಿನ ಜೀವಚರಗಳ ಕುರಿತಾದ ಅಪಾರ ಜ್ಞಾನದಿಂದಾಗಿ ಕರ್ವಾಲೋ ಅವರ ಶಿಷ್ಯನಾಗಿರುತ್ತಾನೆ.

ಮಂದಣ್ಣ ವಿವರಿಸಿದ ಹಾರುವ ಓತಿಯ ಪ್ರಭೇದವನ್ನು ಹುಡುಕುವ ಸಲುವಾಗಿ ಒಂದು ದಿನ ಕರ್ವಾಲೋ, ಮಂದಣ್ಣ, ಛಾಯಾಚಿತ್ರಕಾರ ಪ್ರಭಾಕರ, ಮರ ಹತ್ತುವುದರಲ್ಲಿ ನಿಪುಣನಾಗಿದ್ದ ಎಂಗ್ಟ, ಬಿರಿಯಾನಿ ಮಾಡುವುದರಲ್ಲಿ ಪ್ರಸಿದ್ಧನಾಗಿದ್ದ ಕರಿಯಪ್ಪ, ತೇಜಸ್ವಿಯವರು, ಅವರ ಮನೆ ಕೆಲಸದವನಾದ ಪ್ಯಾರ ಹಾಗೂ ಅವರ ಮುದ್ದಿನ ನಾಯಿ 'ಕಿವಿ 'ಕಾಡಿಗೆ ಹೊರಡುತ್ತಾರೆ. ಕಾಡಿಗೆ ಹೋದ ಕರ್ವಾಲೋ ತಂಡದ ಕಥೆಗಳನ್ನು ಓದುತ್ತಾ ಹೋದಂತೆ ಓದುಗರೂ ಕೂಡ ಆ ತಂಡದವರಲ್ಲೊಬ್ಬರಾಗಿ ಆ ಕಾಡಿನಲ್ಲಿ ಸಾಗುತ್ತಿದ್ದಂತೆ ಅನಿಸುತ್ತದೆ. ಈಚಲು ಹರ ,ಕಾಡು ,ಬೆಟ್ಟಗಳನ್ನು ಅವರೊಂದಿಗೆ ನಾವೂ ಹತ್ತಿ ಇಳಿಯುತ್ತಿದ್ದೇವೆ ಎಂದೆನಿಸುತ್ತದೆ.

ಈ ಎಲ್ಲಾ ಹಾಸ್ಯ ,ರೋಚಕ ಸನ್ನಿವೇಶಗಳ ಮಧ್ಯೆ ಅವರೆಲ್ಲ ಅಷ್ಟೆಲ್ಲ ಅಲೆದಾಡಿದ ನಂತರವೂ ಹಾರುವ ಓತಿ ಕಾಣಸಿಗಲೇ ಇಲ್ಲವಲ್ಲ, ಇನ್ನು ಸಿಗುವುದೇ ಇಲ್ಲವೇನೋ, ಎಂಬಂತಹ ಕುತೂಹಲ ಮತ್ತು ಕೊರಗು ನನ್ನಲ್ಲಿ ಮೂಡಿತ್ತು. ಆದರೆ ಕೊನೆಗೂ ಹಾರುವ ಓತಿ ಅವರಿಗೆ ಕಾಣಸಿಗುತ್ತದೆ! ಆ ಸಂದರ್ಭದಲ್ಲಿ ಅವರೆಲ್ಲರಿಗೂ ಮತ್ತು ಓದುತ್ತಿದ್ದ ನನಗೆ ಆದಂತಹ ಸಂತೋಷ ಮತ್ತು ರೋಚಕತೆಯನ್ನು ಹೇಳಲಾಗದು. ಕೊನೆಗೆ ಕರಿಯಪ್ಪ ಓತಿಯನ್ನು ಹಿಡಿಯುತ್ತಾನೆ ಆದರೆ ಅದು ತಪ್ಪಿಸಿಕೊಂಡು ಹೋಗಿ ಸ್ವತಂತ್ರವಾಗಿಬಿಡುತ್ತದೆ.

ಕರ್ವಾಲೋ ಕಾದಂಬರಿಯ ಮಲೆನಾಡಿನ ಜೀವನ, ಜೇನು ಸಾಕಾಣಿಕೆ ಮತ್ತು ಪ್ರಕೃತಿಯು ತನ್ನ ಮಡಿಲಿನಲ್ಲಿಟ್ಟುಕೊಂಡಿರುವ ನಿಗೂಢತೆಯ ಮೇಲೆ ಬೆಳಕು ಚೆಲ್ಲುತ್ತದೆ .ಒಟ್ಟಿನಲ್ಲಿ ಕರ್ವಾಲೋ ಕಾದಂಬರಿಯು ಓದುಗರನ್ನು ಸೆಳೆದುಕೊಂಡು ,ತನ್ನ ಕಥೆಯೊಳಗೆ ಸೇರಿಸಿಕೊಂಡು, ಓದುಗರು ಓದುವುದಕ್ಕಿಂತ ಹೆಚ್ಚಾಗಿ ಕಾದಂಬರಿಯೇ ಓದುಗರನ್ನು ಓದಿಸಿಕೊಂಡು ಹೋಗುತ್ತದೆ.

**ಅನ್ವಿತ ಡಿ ಎನ್**
ದ್ವಿತೀಯ ಬಿಎ

# ತಂತ್ರಜ್ಞಾನ ಮತ್ತು ಯಂತ್ರ ಜಗತ್ತು: ನುಡಿ

ನುಡಿಯು ನಮ್ಮ ಹೇಳಿಕೆ ಮತ್ತು ಬರವಣಿಗೆಗೆ ಡಿಜಿಟಲ್ ಸ್ವರೂಪವನ್ನು ನೀಡುವ ಅದ್ಭುತ ತಂತ್ರಾಂಶ. ನುಡಿ ತಂತ್ರಾಂಶವು ಕನ್ನಡ ಲಿಪಿಯನ್ನು ಟಂಕಿಸಲು ಮತ್ತು ಸೃಜನಶೀಲತೆಗೆ ಸಹಾಯ ಮಾಡುತ್ತದೆ. ನುಡಿಯನ್ನು 27.12.2001ರಂದು ಕರ್ನಾಟಕ ಸರ್ಕಾರವು ಕನ್ನಡ ಗಣಕ ಪರಿಷತ್ತಿಗೆ ಅಭಿವೃದ್ಧಿಗೊಳಿಸಲು ಸೂಚಿಸಿತು. ವರ್ಷಗಳಿಂದ ನುಡಿಯ 6.5 ಆವೃತ್ತಿಗಳು ಬಿಡುಗಡೆಗೊಂಡಿದ್ದು ಈ ಆವೃತ್ತಿಗಳಲ್ಲಿ ಬಳಕೆದಾರರ ಅನುಭವವನ್ನು ಸುಧಾರಿಸಲು ಮತ್ತು ನವೀನ ಅಗತ್ಯಗಳಿಗೆ ಬೆಂಬಲ ನೀಡಲು ಹೊಸ ವೈಶಿಷ್ಟ್ಯಗಳನ್ನು ಸೇರಿಸಲಾಗಿದೆ.

ನುಡಿಯು ಸರ್ಕಾರದ ಕಚೇರಿಗಳು,ಶಿಕ್ಷಣ ಸಂಸ್ಥೆಗಳು ಮತ್ತು ವೈಯಕ್ತಿಕ ಬಳಕೆದಾರರಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ನುಡಿ ತಂತ್ರಾಂಶವು ಕನ್ನಡ ಸಾಹಿತ್ಯವನ್ನು ಡಿಜಿಟಲ್ ಕ್ಷೇತ್ರದಲ್ಲಿ ಉತ್ತೇಜಿಸಲು ಸಹಾಯಮಾಡಿದೆ. ನುಡಿಯು ಬಳಕೆದಾರ ಸ್ನೇಹಿ ಇಂಟರ್ಫೇಸ್ ಹೊಂದಿದ್ದು ಹೊಸ ಬಳಕೆದಾರರಿಂದ ಅನುಭವ ಹೊಂದಿರುವವರಿಗೂ ನುಡಿಯನ್ನು ಸುಲಭವಾಗಿ ಬಳಸಬಹುದಾಗಿದೆ.

ನುಡಿಯು ವಿಂಡೋಸ್ ಸೇರಿದಂತೆ ಹಲವಾರು ಗಣಕ ವೇದಿಕೆಗಳಲ್ಲಿ ಲಭ್ಯವಿದೆ. ನುಡಿ ಬಳಕೆದಾರರಿಗಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸಮುದಾಯಗಳನ್ನು ನಿರ್ಮಾಣ ಮಾಡಲಾಗಿದೆ, ಅದರಲ್ಲಿ ನಮ್ಮ ಸಲಹೆಗಳನ್ನು ಮತ್ತು ಪರಾಮರ್ಶೆಗಳನ್ನು




ಹಂಚಿಕೊಳ್ಳಬಹುದು. ಒಟ್ಟಾರೆ,ನುಡಿ ತಂತ್ರಾಂಶ ಕನ್ನಡ ಡಿಜಿಟಲ್ ಶ್ರೇಣಿಯಲ್ಲಿ ಮಹತ್ವಪೂರ್ಣ ಕೊಡುಗೆ ಹಾಗೂ ತಂತ್ರಜ್ಞಾನದ ಮಾರ್ಗದಲ್ಲಿ ಅಭಿವೃದ್ಧಿಯಾಗಿ ಮುಂದುವರಿಯುತ್ತಿದೆ.

**ಶಮಿತಾ**
ತೃತೀಯ ಬಿ ಸಿ ಎ

# ಜುಗಾರಿ ಕ್ರಾಸ್ ಎಂಬ ಮಾಯಕದ ಜಗತ್ತು

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದ ಮೂಡಿಗೆರೆಯ ಪುಸ್ತಕ ಪ್ರಕಾಶನದವರು ಪ್ರಕಾಶಿಸಿದಂತಹ ಜುಗಾರಿ ಕ್ರಾಸ್ ಎಂಬ ಕಾದಂಬರಿಯು 1994 ರಲ್ಲಿ ಬಿಡುಗಡೆಯಾಗಿದ್ದು,, ಇಲ್ಲಿಯವರೆಗೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ಮುದ್ರಣಗಳನ್ನು ಕಂಡಿದೆ. ಕಾದಂಬರಿಯು ಒಟ್ಟೂ 30 ಅಧ್ಯಾಯಗಳನ್ನು ಒಳಗೊಂಡಿದ್ದು, ಒಂದೊಂದೇ ಅಧ್ಯಾಯದಲ್ಲಿ ನಿಧಾನವಾಗಿ ಜುಗಾರಿ ಕ್ರಾಸ್, ದೇವರಪುರ, ಆ ಮಲೆನಾಡಿನ ಕಾಡುಗಳಲ್ಲಿ ನಡೆಯುವ ಕಾಳ ದಂಧೆಗಳ ಕರಾಳ ಲೋಕವನ್ನು ಓದುಗರ ಮುಂದೆ ಬಿಚ್ಚಿಡುತ್ತಾ ಹೋಗುತ್ತದೆ. ಇಲ್ಲಿ ಬರುವಂತಹ ಪಾತ್ರಗಳೂ ಒಂದಕ್ಕಿಂತ ಇನ್ನೊಂದು ವಿಚಿತ್ರವಾದುದು, ವಿಸ್ಮಯಕಾರಿಯಾದುದು.

ಈ ಕತೆಯು ಮಂಗಳೂರು - ಬೆಂಗಳೂರು ಹೆದ್ದಾರಿಯ ನಡುವೆ ಇರುವ ಜುಗಾರಿ ಕ್ರಾಸ್ ಮತ್ತು ದೇವಪುರದ ಸುತ್ತ ಕೇವಲ ಇಪ್ಪತ್ನಾಲ್ಕು ಗಂಟೆಗಳ ಅವಧಿಯಲ್ಲಿ ನಡೆಯುವಂಥದ್ದು. ಆದರೆ ಅಲ್ಲಿ ಬರುವ ಮುಗ್ಧ ಮತ್ತು ಕರಾಳ ಪಾತ್ರಗಳು, ಸನ್ನಿವೇಶಗಳೆಲ್ಲಾ ಸೇರಿ ಒಂದು ಯುಗದಲ್ಲಿ ನಡೆದ ಕತೆ ಎಂದೆನಿಸಿಬಿಡುತ್ತದೆ. ಪುಸ್ತಕದ ಮುನ್ನುಡಿಯಲ್ಲಿ ತೇಜಸ್ವಿಯವರೇ ಹೇಳಿದಂತೆ ಇದೊಂದು ರೊಮ್ಯಾಂಟಿಕ್ ಥ್ರಿಲ್ಲರ್. ಸಹ್ಯಾದ್ರಿಯ ಕಾಡುಗಳ ತಪ್ಪಲಿನಲ್ಲಿ ನಡೆಯುತ್ತಿರುವ ವಾಸ್ತವದ ಸಾಮಾಜಿಕ ಕಾದಂಬರಿ. ಕುವೆಂಪುರವರ ಕಾನೂರು ಹೆಗ್ಗಡತಿ, ಕಾರಂತರ ಮರಳಿ ಮಣ್ಣಿಗೆ ಕಾಲದ ಸಹ್ಯಾದ್ರಿ ಕಾಡುಗಳಿಗೂ ಇವತ್ತಿನ ಪರಿಸ್ಥಿತಿಗೂ ಇರುವ ಅಜಗಜಾಂತರ ವ್ಯತ್ಯಾಸಕ್ಕೆ ಈ ಕಾದಂಬರಿಯೇ ಉದಾಹರಣೆ. ನಮ್ಮ ಕಾಡುಗಳಲ್ಲಿನ ಅತ್ಯಮೂಲ್ಯ ನೈಸರ್ಗಿಕ ಸಂಪತ್ತುಗಳು ಕಳ್ಳ ಖದೀಮರ ಪಾಲಾಗುತ್ತಿರುವುದಕ್ಕೆ ಲೇಖಕರು ಬೇಸರವನ್ನು ವ್ಯಕ್ತಪಡಿಸುತ್ತಾರೆ.


ಈ ಕತೆ ಪಾತ್ರಗಳಿಗೆ ಇರುವ ಜೀವನವನ್ನು ಎದುರಿಸುವ ಗಂಭೀರವಾದ ಎದೆಗಾರಿಕೆಯನ್ನೂ ತೋರಿಸಿಕೊಡುತ್ತದೆ. ಮೇಲುನೋಟಕ್ಕೆ ನೋಡಿದಾಗ ಇಲ್ಲಿ ಬರುವ ಪಾತ್ರಗಳು ಒಂದಕ್ಕೊಂದು ಸಂಬಂಧವೇ ಇಲ್ಲದ್ದು ಎಂದೆನಿಸಿದರೂ ಅವುಗಳು ಈ ಜುಗಾರಿ ಕ್ರಾಸ್ ಸುತ್ತಮುತ್ತಲಿನ ಮಾಯಕದ ಲೋಕದಲ್ಲಿ ಒಂದಕ್ಕೊಂದು ಬೆಸೆದುಕೊಂಡಂತೆಯೇ ಇರುತ್ತವೆ.

ಇಲ್ಲಿ ನಡೆಯುವ ಕಾಳಸಂತೆ, ಅಕ್ರಮಗಳು ಕೇವಲ ಇಲ್ಲಿ ಮಾತ್ರ ನಡೆಯದೇ ಜಗತ್ತಿನ ಬಹಳಷ್ಟು ಕಡೆ ನಡೆಯುವ ಸಾಮಾನ್ಯ ಜನರಿಗೆ ಗೊತ್ತೇ ಇಲ್ಲದ ಇನ್ನೊಂದು ಪ್ರಪಂಚವೂ ನಮ್ಮ ಸುತ್ತಲೂ ಇದೆ ಎಂಬುದನ್ನು ಅರಿವು ಮೂಡಿಸುತ್ತದೆ. ಆ ಭೂಗತ ಲೋಕವು ಎಂತಹದ್ದು? ಅಲ್ಲಿ ಹೋದವರ ಕತೆ ಏನಾಗುತ್ತದೆ? ಅದಕ್ಕೆ ಸಂಬಂಧ ಇಲ್ಲದವರೂ ಗೊತ್ತಿದ್ದು ಹಣದ ಆಸೆಗೋ ಅಥವಾ ಗೊತ್ತಿಲ್ಲದೆಯೋ ಹೇಗೆ ಅಲ್ಲಿ ಹೋಗಿ ಸಿಕ್ಕಿಹಾಕಿಕೊಂಡು ಹೊರಬರಲಾರದ ಜೇಡನ ಬಲೆಗೆ ಬಿದ್ದಂತೆ ಅವರ ಜೀವನ ನರಕವಾಗುತ್ತದೆ ಎಂಬುದನ್ನು ಕತೆಗಾರರು ಇಲ್ಲಿ ವಿವರಿಸಿದ್ದಾರೆ.

ಜುಗಾರಿ ಕ್ರಾಸ್! ಹೆಸರೇ ಒಂಥರಾ ವಿಚಿತ್ರ. ಅದು ಆ ಹೆಸರಿನ ಹಿಂದಿನ ರಹಸ್ಯವೇನು ಎಂಬುದು ನಮ್ಮನ್ನು ಕಾಡದೇ ಬಿಡುವುದಿಲ್ಲ. ಅದೊಂಥರ ನಿರ್ಜನ ಪ್ರದೇಶ. ದಟ್ಟವಾದ ಪಶ್ಚಿಮ ಘಟ್ಟಗಳ ಕಾಡಿನ ನಡುವೆ ನಾಲ್ಕು ದಾರಿಗಳು ಕೂಡುವ ಜಾಗ ಅದು. ಆದರೆ ಅಲ್ಲಿ ವಾಹನ ಓಡಾಟ ಅಷ್ಟೊಂದು ಇರುವುದೂ ಇಲ್ಲ, ಜನರ ಸಂಚಾರವೂ ಕಡಿಮೆಯೇ. ಆದರೂ ಆ ಜುಗಾರಿ ಕ್ರಾಸ್ ನಲ್ಲಿ ಗಿರಾಕಿಗಳು ಬರಬಹುದೆಂದು ಕಾಯುತ್ತಾ ಬಾಡಿಗೆ ಟ್ಯಾಕ್ಸಿಗಳು ನಿಂತಿರುತ್ತವೆ. ಅಲ್ಲಿರುವ ಫಾರೆಸ್ಟ್ ಚೆಕ್ ಪೋಸ್ಟ್ ಬಳಿಯ ಚಾ ಹೋಟೆಲ್ಲೂ ಜನರಿರದೇ ನೊಣ ಹೊಡೆಯುತ್ತಾ ಬಿದ್ದಿರುತ್ತದೆ. ಒಬ್ಬ ಫಾರೆಸ್ಟರ್ ಮತ್ತು ಗಾರ್ಡ್ ಮಾತ್ರ ಅಲ್ಲಿರುವುದು. ಆ ಜಾಗವೇ ನೋಡಿದವರಿಗೆ ಒಂಥರಾ ಅನುಮಾನವನ್ನು, ಬಹಳಷ್ಟು ಪ್ರಶ್ನೆಗಳನ್ನು ಹುಟ್ಟಿಸುವಂಥದ್ದು. ಅಲ್ಲಿನ ಫಾರೆಸ್ಟರ್ ಇಕ್ಬಾಲ್ ಸಾಬ ಮತ್ತು ಗಾರ್ಡ್ ಗುರಪ್ಪನ ಸೇರಿ ಅಲ್ಲಿ ಬರುವ ವಾಹನಗಳನ್ನು ತಡೆಹಾಕಿ ಹೇಗೆ ಅವರಿಂದ ಲಂಚವನ್ನು ಪೀಕುತ್ತಾರೆ? ಅದು ನಿಂತಿದ್ದು ಹೇಗೆ ಎಂಬಲ್ಲಿಂದ ಈ ಜುಗಾರ್ ಕ್ರಾಸ್ ಎಂಬ ರೋಚಕ ಕಥನ ಆರಂಭವಾಗುತ್ತದೆ.

ಪುಸ್ತಕ ವಿಮರ್ಶೆ

ಜುಗಾರಿ ಕ್ರಾಸ್ ನಲ್ಲಿ ಹೋಗಿ ಬಂದು ಮಾಡುವ ಗಾಡಿಗಳನ್ನು ತಡೆದು ದೋಚುತ್ತಿದ್ದ ಫಾರೆಸ್ಟರ್ ಇಕ್ಬಾಲನ ಲಂಚಾವತಾರ ಹೇಗೆ ಕೊನೆಗೊಂಡಿತು ಎನ್ನುವಲ್ಲಿಂದ ಶುರುವಾಗುವ ಕತೆ ವಿವಿಧ ಮಜಲುಗಳನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಜುಗಾರಿ ಕ್ರಾಸ್ ಮತ್ತು ದೇವಪುರದ ಆ ವಿಚಿತ್ರ ಕೊಂಪೆಯ ಮಾಯಕದ ಲೋಕವನ್ನು ಇವೆಲ್ಲಾ ಪಾತ್ರಗಳು ಹೇಳುತ್ತಾ ಹೋಗುತ್ತದೆ. ಪುಸ್ತಕವನ್ನು ಓದಿ ಕೆಳಗಿಟ್ಟ ಮೇಲೂ ಕೆಲವು ಪಾತ್ರಗಳು ನಿಮ್ಮ ಮನದಲ್ಲೇ ಉಳಿದುಬಿಡುತ್ತದೆ. ಪೂರ್ಣಚಂದ್ರ ತೇಜಸ್ವಿಯವರ ಕತೆ ಕಾದಂಬರಿಗಳಲ್ಲಿನ ಪಾತ್ರ ಪ್ರಪಂಚಗಳ ಮೋಡಿಯೇ ಅಂಥದ್ದು. ಸುಲಭವಾಗಿ ಅವುಗಳನ್ನು ನಿಮ್ಮ ತಲೆಯಿಂದ ತೆಗೆದುಹಾಕಲು ಸಾಧ್ಯವಿಲ್ಲ. ಈ ಕಾದಂಬರಿಯು ನಮ್ಮಲ್ಲಿ ಅಚ್ಚರಿಗಳನ್ನು ಹುಟ್ಟಿಸುತ್ತಾ ಒಂದೇ ಉಸಿರಿಗೆ ಎಲ್ಲವನ್ನೂ ಓದಿಸಿಕೊಂಡು ಹೋಗುತ್ತದೆ. ಕೊನೆ ಕೊನೆಯಲ್ಲಂತೂ ಇನ್ನಷ್ಟು ರೋಚಕದ ತಿರುವುಗಳು ನಮ್ಮನ್ನು ಪತ್ತೇದಾರಿ ಥ್ರಿಲ್ಲರ್ ಸಿನೆಮಾಗಳನ್ನು ನೋಡುವಾಗ ತುದಿಗಾಲಲ್ಲಿ ನೋಡುತ್ತೇವಲ್ಲ ಹಾಗೆ ಓದಿಬಿಡುತ್ತೇವೆ. ಕತೆ ಕೊನೆಯಲ್ಲಿ ಸಮಾಧಾನಕರವಾಗಿ ಮುಗಿದಾಗ ಅಬ್ಬಾ!! ಎಂದು ನಿಟ್ಟುಸಿರನ್ನೂ ಬಿಡುತ್ತೇವೆ. ಅಷ್ಟು ಆಳವಾಗಿ ಕತೆ ನಿಮ್ಮನ್ನು ಕರೆದೊಯ್ಯುತ್ತದೆ.




ಜುಗಾರಿ ಕ್ರಾಸ್ ಕಾದಂಬರಿಯು ಕೇವಲ ಮನೋರಂಜನೆಯ ಸರಕಾಗದೇ ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆಯುವ ಸಾಮಾಜಿಕ ಸಮಸ್ಯೆಗಳು, ನಾಶವಾಗುತ್ತಿರುವ ಪಶ್ಚಿಮ ಘಟ್ಟದ ಕಾಡುಗಳ ಬಗ್ಗೆ ಕಳವಳವೂ ಇಲ್ಲಿ ವ್ಯಕ್ತವಾಗುತ್ತದೆ. ಸಾಹಿತ್ಯದ ದೃಷ್ಟಿಯಿಂದ ಮಾತ್ರವಲ್ಲದೇ ಸಾಮಾಜಿಕ ದೃಷ್ಟಿಯಲ್ಲೂ ಇದೊಂದು ಬಹುಮುಖ್ಯವಾದ ಕಾದಂಬರಿಯಾಗಿ ಉಳಿಯಲು ಇದೇ ಕಾರಣ. ಸಹ್ಯಾದ್ರಿ ಕಾಡುಗಳು ತೆರೆದಿಟ್ಟ ಖಜಾನೆಗಳಂತಾಗಿಬಿಟ್ಟಿದೆ. ಈ ಕಾಡುಗಳ ಒಂದೊಂದೇ ಮರ ಎರಡು ಮೂರು ಲಕ್ಷ ಬೆಲೆಬಾಳುತ್ತವೆ. ಕಲ್ಲುಕಳ್ಳರಿಗೆ, ಮರಗಳ್ಳರಿಗೆ, ಗಂಧ ಚಕ್ಕೆ ಕಳ್ಳ ಸಾಗಣೆ ಮಾಡುವ ಖದೀಮರಿಗೆ ಕಣ್ಣು ಹರಿಸಿದಲ್ಲೆಲ್ಲಾ ಹಣದ ರಾಶಿ ಬಿದ್ದಿರುವಂತೆ ಕಾಣುತ್ತದೆ. ಇದರಿಂದ ಉತ್ಪತ್ತಿಯಾದ ಕಾಳಧನ ದೇಶದ ರಾಜಕೀಯದ ಮೇಲೆ ಬೀರುವ ಪರಿಣಾಮವನ್ನೂ ಭಯಾನಕವಾದುದು. ಇದೇ ಕಾದಂಬರಿಯಲ್ಲಿ ಬರುವ ಒಂದು ಮಾತಿನಂತೆ ನಾವು ಒಂದು ವಿಷಯವನ್ನೋ, ಸಾಹಿತ್ಯವನ್ನೋ ಬಹಳಷ್ಟು ದೃಷ್ಟಿಯಲ್ಲಿ ಅರ್ಥ ಮಾಡಿಕೊಳ್ಳಬಹುದು. ಈ ಕೃತಿಯನ್ನೂ ಕೂಡ ನಾವು ಮೊದಲ ಬಾರಿ ಓದಿದಾಗ ಒಂದು ರೀತಿಯಲ್ಲಿ ಅರ್ಥವಾಗಬಹುದು. ಇನ್ನೊಂದು ಬಾರಿ ಓದಿದಾಗ ಅದು ಬೇರೆಯದೇ ಅರ್ಥ ಕೊಡಲೂಬಹುದು.

ಜುಗಾರ್ ಕ್ರಾಸ್ ನ ಕತೆಯ ನಡುವೆ ಮಲೆನಾಡಿನ ಕಾಡಿನಲ್ಲಿರುವ ಒಂದು ಜಾತಿಯ ಮೈಮರೆಸುವ ಬಳ್ಳಿಯ ಉಲ್ಲೇಖ ಬರುತ್ತದೆ. ಅದು ಅಕಸ್ಮಾತ್ ಯಾರಿಗಾದರೂ ತಾಗಿದರೆ, ತಾಗಿದವನಿಗೆ ಬಂದ ದಾರಿ ಸಂಪೂರ್ಣ ಮರೆತೇ ಹೋಗುತ್ತದೆ.

**ಪೂರ್ಣಚಂದ್ರ ತೇಜಸ್ವಿಯವರ ಕತೆ ಕಾದಂಬರಿಗಳಲ್ಲಿನ ಪಾತ್ರ ಪ್ರಪಂಚಗಳ ಮೋಡಿಯೇ ಅಂಥದ್ದು. ಸುಲಭವಾಗಿ ಅವುಗಳನ್ನು ನಿಮ್ಮ ತಲೆಯಿಂದ ತೆಗೆದುಹಾಕಲು ಸಾಧ್ಯವಿಲ್ಲ. ಈ ಕಾದಂಬರಿಯು ನಮ್ಮಲ್ಲಿ ಅಚ್ಚರಿಗಳನ್ನು ಹುಟ್ಟಿಸುತ್ತಾ ಒಂದೇ ಉಸಿರಿಗೆ ಎಲ್ಲವನ್ನೂ ಓದಿಸಿಕೊಂಡು ಹೋಗುತ್ತದೆ.**

ಎಷ್ಟೋ ಬಾರಿ ಕಳೆದು ಹೋದ ದನಕರುಗಳು ಹಿಂದಿರುಗಿ ಬಂದರೂ ಹುಡುಕಿ ಹೋದವರು ಮಾತ್ರ ಹಿಂದಿರಿಗುವುದಿಲ್ಲ. ಹೀಗೆ ಇದರ ಬಗ್ಗೆ ತೇಜಸ್ವಿಯವರು ಈ ವಿಷಯವನ್ನು ಪ್ರಸ್ತಾಪಿಸುತ್ತಾರೆ. ಮಲೆನಾಡಿನ ನಡುವೆ ಹುಟ್ಟಿ ಬೆಳೆದವರಿಗೆ ಇದು ಬಹುತೇಕ ಗೊತ್ತಿರುವಂತಹ ಸಂಗತಿ. ಆದರೆ ಮುಂದಿನ ಪೀಳಿಗೆಗೆ ಇದು ಗೊತ್ತಿರುವುದೋ ಏನೋ. ಇದರಲ್ಲಿ ಸತ್ಯ ಎಷ್ಟಿದೆಯೋ ಗೊತ್ತಿಲ್ಲ. ಆದರೆ ಅದರ ಬಗ್ಗೆ ಜನರಿಗೆ ವಿಚಿತ್ರ ಕುತೂಹಲ ಇರುವುದಂತೂ ಸತ್ಯ. ಸಹ್ಯಾದ್ರಿ ಕಾಡುಗಳಲ್ಲಿ ನಡೆಯುವ ಇಂದಿಗೂ ಬಹಳಷ್ಟು ಜನರಿಗೆ ಗೊತ್ತಿಲ್ಲದ ಸಂಗತಿಗಳು ಅಲ್ಲಿಯೇ ಜನರ ನಡುವೆ ಇತಿಹಾಸದಲ್ಲಿ ದಾಖಲಾಗದೇ ಹುದುಗಿಹೋಗಿಬಿಡುತ್ತದೆ. ತೇಜಸ್ವಿಯವರ ಇನ್ನೊಂದು ಕತೆಯಲ್ಲಿ ಔಷಧೀಯ ಸಸ್ಯದ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಾರೆ.

ಈಗೀಗ ಪ್ರಸಿದ್ಧವಾಗುತ್ತಿರುವ ಓಟಿಟಿ ವೇದಿಕೆಗಳು ಒದಗಿಸುತ್ತಿರುವ ಸಿನೆಮಾಗಳು, ಸೆರಿಸ್ ಗಳಿಂದಾಗಿ ಪುಸ್ತಕಗಳ ಕಡೆಗಿನ ಆಸಕ್ತಿ ತುಸು ಕಡಿಮೆಯಾಗುತ್ತಿದೆಯೇ ಎನ್ನುವ ಭಾವನೆಯೂ ಬರುತ್ತಿದೆ. ಅವುಗಳೂ ಸಾಹಿತ್ಯದ ಒಂದು ಮುಂದುವರೆದ ಭಾಗವೇ. ಆದರೂ ಕೆಲವು ಕತೆ-ಕಾದಂಬರಿಗಳು ನಮ್ಮ ಕಲ್ಪನೆಗಳಿಗೆ ಪುಷ್ಟಿಯನ್ನು ಕೊಡುವ ಹಾಗಿರುತ್ತದೆ. ಯಾಕೆ ಪುಸ್ತಕಗಳನ್ನು ಓದಬೇಕು ಎನ್ನುವುದಕ್ಕೆ ಕಾರಣ ಇಷ್ಟೇ. ಒಂದು ಭಾಷೆಯ ಪುಸ್ತಕಗಳನ್ನು ಓದುವುದರಿಂದ ಆ ಭಾಷೆಯ ಉಳಿವಿಗೂ ಸಹಕಾರಿಯಾಗುತ್ತದೆ, ನಮ್ಮ ಊಹಾಶಕ್ತಿಯನ್ನೂ ಹೆಚ್ಚು ಮಾಡುತ್ತದೆ.
ತಮ್ಮ ಕತೆಗಳ ಮೂಲಕ ನಿಮ್ಮನ್ನು ಯಾವುದೋ ಒಂದು ಬೇರೆ ಲೋಕಕ್ಕೆ ಕರೆದೊಯ್ಯುವ ಸಾಮರ್ಥ್ಯವನ್ನು ಒಂದು ಸಾಹಿತ್ಯ ಹೊಂದಿದೆ. ಬಹುಷಃ ಪುಸ್ತಕಗಳಿಗೆ ಇರುವ ತಾಕತ್ತು ಅದು. ಕನ್ನಡ ಸಾಹಿತ್ಯವು ಮಹಾಸಾಗರವಿದ್ದಂತೆ. ಆ ಮಹಾಸಾಗರದಲ್ಲಿ ನಾವು ಒಂದು ಬೊಗಸೆಯಷ್ಟು ನೀರನ್ನು ಹಿಡಿಯುವ ಪ್ರಯತ್ನ ಮಾಡುತ್ತಿದ್ದೇವಷ್ಟೇ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಜುಗಾರಿ ಕ್ರಾಸ್ ನಂತಹ ಬಹಳಷ್ಟು ಕೃತಿಗಳಿವೆ. ಕನ್ನಡ ಭಾಷೆಯು ಪ್ರಪಂಚದ ಪುರಾತನ ಭಾಷೆಗಳಲ್ಲಿ ಒಂದು. ಪುರಾತನ ಮಾತ್ರವಲ್ಲದೇ ವ್ಯಾಕರಣದ ದೃಷ್ಟಿಯಲ್ಲೂ, ಭಾಷೆಯಲ್ಲಿನ ವೈಜ್ಞಾನಿಕತೆಯ ದೃಷ್ಟಿಯಲ್ಲೂ ಶ್ರೇಷ್ಟತೆಯನ್ನು ಹೊಂದಿದೆ. ಸಾಹಿತ್ಯವು ಕೇವಲ ಭಾಷಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ಇತರರಿಗೂ ಅಷ್ಟೇ ಮಹತ್ವದ್ದು. ನಮ್ಮ ಪರಂಪರೆಯನ್ನು, ಇತಿಹಾಸವನ್ನು, ಕಲೆ ಸಂಸ್ಕೃತಿಯನ್ನು ಅರಿಯಬೇಕಾದರೆ ಸಾಹಿತ್ಯಗಳನ್ನು ಓದುವುದು ಬಹುಮುಖ್ಯವಾಗುತ್ತದೆ. ಜ್ಞಾನ ಪರಂಪರೆಯನ್ನು ನಮ್ಮ ಮುಂದಿನ ಪೀಳಿಗೆ ದಾಟಿಸುವುದೂ ಕೂಡ ಅಷ್ಟೇ ಮುಖ್ಯ. ಭಾಷೆಯ ಉಳಿವು ಮಾತ್ರವಲ್ಲದೇ ಅದರ ಬೆಳವಣಿಗೆಯೂ ಆಗಬೇಕೆಂಬುದು ನಮ್ಮ ಆಶಯವಾಗಿದೆ.

**ಚಂದನ ಭಟ್ ಕೋಣೆಮನೆ**
ಎಂ ಬಿ ಎ

---

# ಪುಟ್ಕತೆ

### ೧. ನಾಳೆಯ ಪಿಸುಮಾತುಗಳು

ಕಾಡಿನಲ್ಲಿ ಕಳೆದುಹೋದ ಅವಳು, ಹಳೆಯ ದಿನಚರಿಯನ್ನು ಕಂಡುಕೊಂಡಳು. ಪ್ರತಿ ಪುಟವೂ ಆಕೆಯ ಭವಿಷ್ಯವನ್ನು ಬಹಿರಂಗಪಡಿಸಿತು. ಕೊನೆಯ ಪುಟ ಖಾಲಿಯಾಗಿತ್ತು. ಅವಳ ಅಂತಿಮ ಆಯ್ಕೆಗಾಗಿ ಕಾಯುತ್ತಿತ್ತು.

### ೨. ಬದುಕದ ಕನಸುಗಳ ಪ್ರತಿಧ್ವನಿಗಳು

ದಿನಚರಿಯಲ್ಲಿ ಅವಳು ಎಂದಿಗೂ ಬದುಕದ ಕನಸುಗಳಿದ್ದವು. ತನ್ನ ನೂರನೇ ಹುಟ್ಟು ಹಬ್ಬದಂದು, ಅವಳ ಮೊಮ್ಮಗಳು ಅದನ್ನು ಗಟ್ಟಿಯಾಗಿ ಓದುತ್ತಿದ್ದಳು, ಆಸೆಯನ್ನು ಪೂರೈಸುತ್ತಿದ್ದಳು ಮತ್ತು ಕನಸುಗಳು ಎರಡು ಬಾರಿ ಸಾಯದಂತೆ ನೋಡಿಕೊಳ್ಳುತ್ತಿದ್ದಳು.

### ೩. ಜೀವಿಸಿದ ಭಾವ

ಗದ್ದಲದ ನಗರದಲ್ಲಿ, ಒಬ್ಬ ಒಂಟಿ ಬೀದಿ ಕಲಾವಿದನು ಗೋಡೆಗಳ ಮೇಲೆ ಕನಸುಗಳನ್ನು ಚಿತ್ರಿಸಿದನು. ಆ ರಾತ್ರಿ ಅವನ ಭಿತ್ತಿ ಜೀವ ಪಡೆದವು. ಎಲ್ಲರಿಗೂ ಸಂತೋಷ ಮತ್ತು ಆಶ್ಚರ್ಯವಾಯಿತು.

**- ಸುಶ್ಮಿತಾ ಬಿ.ಆರ್**

## ಧಗೆಯ ಬೇಗೆ

ಪುಟ್ಟಿಯು ಇದ್ದಳು ಪಟ್ಟಣದೊಳಗಡೆ
ತೊಟ್ಟಳು ಬೇಗೆಯ ಚಿಂತಿಸಿ ಮನದಲೆ
ಸುಟ್ಟಳು ಧರಣಿಯ ಧಗೆಯಿಂದೊಳಗಡೆ
ನಿಟ್ಟುಸಿರುರಿಟ್ಟಳು ಕೃಷಿಕನನೆದಳೆ

ಸುತ್ತ-ಮುತ್ತಲಲು ಹಾಹಾಕಾರವು
ಕಿತ್ತು ತಿನ್ನುವ ಬಡತನದಲಿರೆಗಣ
ಬತ್ತಿಹುದಶ್ರುವು ಇನ್ನೇನುಳಿದವು
ಕತ್ತಲೆಯಲಿ ಜಗವಿದೆ ಪ್ರತಿಚಣ

ಬೇಡಿದಳು ವರುಣನ ದರ್ಶನಕಾಗಿ
ಆಡಿದನಾತನ ಆರ್ತವ ಒಮ್ಮೆಲೆ
ನುಡಿದನು ಪೃಥ್ವಿಯ ಅಳಲನು, ಭಾಷೆಯ
ನೀಡಿಹೆ ಆಗಲು ಬರಲೆನೆ ಕುಸಿದಳು

ಆಕೆಯ ಕಂಡು ಅವಳ ನೋವನುಂಡು
ನಾಕವಿರ ಭೂಮಿಯನರಕ ಮಾಡಿದ
ಲೋಕದ ಕಾರ್ಯಕೆ ಪರಿಣಾಮವಿದುವು
ಕಾಕತನ ಬಿಟ್ಟರೆ ಹಸಿರು ಆಗುವುದೆಂದ

ಆಗಲಿಯೆನ್ನುತ ಮಳೆಯನು ಬೇಡುತ
ಬಾಗುತ ನಮಿಸುತ ಕೋರಿದಳು ಜನಕೆ
ಈ ಗತಿಯ ಬಗೆಹರಿಸಲು ತುಡಿಯಲು
ಕಗ್ಗತ್ತಲಾಗ ಮಿಂಚಿಂದ ಬೆಳಗಿತು

ಜನರೂ - ದನಗಳು ನಲಿಯಲು ಕುಣಿಯುತ
ನೆನೆಯಲು ಆ ರೈತನ ಕಣ್ಣು ನೀರಲಿ
ಕನಸಲಿ ಪುಟ್ಟಿಯು ಕುಣಿದಾಡುತನಲಿ
ಮನೆಯಲಿ ಸದ್ದಾದುದ ಕೇಳಿ ಎದ್ದಳು

---

# ಹನಿಗವನಗಳು

ಕ್ವೀನ್ ಬಿಟ್ಟು ಹೋದ್ಮೇಲೆ ಕೆಲವ್ರು ಕಿಂಗ್ ಆಗ್ತಾರೆ...
ಓವರ್ ಥಿಂಕಿಂಗ್
ಸ್ಮೋಕಿಂಗ್
ಡ್ರಿಂಕಿಂಗ್

***

ನೆಟ್ಟಗೆ ಮಲಗಿದರೂ ಬಾರದ ನಿದ್ದೆ, ನೆಟ್
ಆಫ್ ಮಾಡಿದಾಗ ಬರುವುದಂತೆ

***

ಸಂಬಂಧ ಭಾವಣೆಯಿಂದನೇ ಹೊರತು,
ರಕ್ತದಿಂದ ಅಲ್ಲ. ಯಾಕಂದ್ರೆ ನಮ್ ರಕ್ತ
ಸಂಬಂಧ ನೋಡ್ತಾ ಹೋದ್ರೆ ಎಷ್ಟೋ
ಸೊಳ್ಳೆಗಳ ಜೊತೆನೂ ಇರುತ್ತೆ.

ಬರುವ ಆದಾಯ ಕಡಿಮೆ ಆದಂತೆ, ಸಿಗುವ
ವಿದಾಯ ಜಾಸ್ತಿ ಆಯ್ತಂತೆ.

**- ಸುಶ್ಮಿತಾ ಬಿ.ಆರ್**

# ಅಮ್ಮಾ ಏನೆತ ಬಗ್ಗೆ ಬರೆಪಿನಿ

ಅಮ್ಮಾ ಏನೆತ ಬಗ್ಗೆ ಬರೆಪಿನಿ? ಎಂದು ಹಾವಭಾವ ಸಮೇತವಾಗಿ ಕಿರುಚಾಡುತ್ತಿರಬೇಕಾದರೆ ಪಕ್ಕದ ಮೇಜಿನಲ್ಲಿ ವಿರಾಜಮಾನವಾಗಿದ್ದ ಕಾಡಿಗೆ ಡಬ್ಬ ನನ್ನ ಕೈಯ ದಾಳಿಗೆ ತತ್ತರಿಸಿ ಉರುಳಿ ಬಿತ್ತು. ಕಪ್ಪು ಕಾಡಿಗೆ ಕಣ್ಣಿನ ಕುಡಿ ನೋಟದ ಚಿತ್ರ ಯಾವುದೇ ಕಾರಣವಿಲ್ಲದೆ ಮನಸ್ಸಿನಲ್ಲಿ ಮೂಡಿತು. ಅಲ್ಲಿಯವರೆಗೆ ಕೇವಲ ಕಪ್ಪು ಬಣ್ಣದ ಜಡ ವಸ್ತುವಾಗಿದ್ದ ಅದರ ಬಗ್ಗೆ ಒಂದು ವಿಧವಾದ ಅವ್ಯಕ್ತ ಆಸಕ್ತಿ ಮೂಡಿತು. ಹಸುಗೂಸಿನ ಹಾಲುಗಲ್ಲದ ಮೇಲೆ ಯಾರ ಕಾಕದೃಷ್ಟಿ ತಾಕದಿರಲಿ ಎಂದು ದುಂಡಗೆ ಕಪ್ಪಗಿನ ಬೊಟ್ಟನ್ನಿಡುತ್ತಾಳೆ ತಾಯಿ. ಸಿಂಗಾರಗೊಂಡಿರುವ ನವವಧುವಿನ ಗಲ್ಲದ ಮೇಲೂ ರಾರಾಜಿಸುವ ಈ ಕಾಡಿಗೆಯ ತಯಾರಿಯ ಪ್ರಕ್ರಿಯೆಯಾದರೂ ಏನು? ಮತ್ತು ಮಹತ್ವವೇನಾಗಿರಬಹುದು?

ಸಹಸ್ರಾರು ವರ್ಷಗಳಿಂದ ಪ್ರಾಚೀನ ಈಜಿಪ್ಟ್, ಭಾರತ, ಮೆಸೊಪೊಟೇಮಿಯ ನಾಗರಿಕತೆಗಳೊಂದಿಗೆ ಕಾಡಿಗೆ ತನ್ನ ಅಸ್ತಿತ್ವವನ್ನು ಸಾಧಿಸುತ್ತದೆ. ಕಾಳಿದಾಸನ ಅಭಿಜ್ಞಾನ ಶಾಕುಂತಲ ಮತ್ತು ಮೇಘದೂತ ಮಹಾಕಾವ್ಯದಲ್ಲಿ ಅಲತಿಗೆ ಮತ್ತು ಅಂಜನ ಎಂಬ ಪದಗಳ ಪ್ರಯೋಗವಿದೆ. ಕಾಜಲ್,ಅಂಜನಂ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಇದನ್ನು ದೀಪಾವಳಿಯ ಶುಭಘಳಿಗೆಯಲ್ಲಿ ಮನೆಯಲ್ಲಿಯೇ ತಯಾರಿಸುವ ವಾಡಿಕೆಯಂತೆ. ಹತ್ತಿಯ ಬಟ್ಟೆಯನ್ನು ತುಪ್ಪದಲ್ಲಿ ಅದ್ದಿ, ಉರಿಸಿ ಸಂಗ್ರಹವಾದ ಮಸಿಗೆ ಸ್ವಲ್ಪ ತುಪ್ಪವೋ, ಬಾದಾಮಿ ಎಣ್ಣೆಯೋ ಸೇರಿಸಿ ಮಾಡಿದ ಮಿಶ್ರಣವೇ ಕಾಡಿಗೆ.ಆಯುರ್ವೇದದಲ್ಲಿ ಪಿಂಡ, ರಸಕ್ರಿಯ ಮತ್ತು ಚೂರ್ಣ ಎಂಬ ಕಾಡಿಗೆಯ ವಿವಿಧ ಮಾದರಿಗಳಿವೆ. ಅಂಜನದಲ್ಲಿ ಲೇಖನ, ರೂಪನ ಮತ್ತು ಪ್ರಸಾದನ ಎಂಬ ಮೂರು ವಿಧಗಳಿವೆ. ಒಟ್ಟಾರೆ ಕಾಡಿಗೆಯು ಬರೀ ಕಣ್ಣಿನ ಸೌಂದರ್ಯವಲ್ಲದೇ ಅದರ ಆರೋಗ್ಯ ಮಹತ್ವದ ಸಾಧನವಾಗಿದೆ. ಲಲನೆಯರ ಪ್ರಸಾದನ ಸಾಮಗ್ರಿಗಳೊಂದಿಗೆ ಬಿದ್ದಿರುವ ಈ ಕಾಡಿಗೆ ಸಾಮಾನ್ಯದ್ದಲ್ಲ. ರಾಮಲಲ್ಲಾನ ಪ್ರಾಣಪ್ರತಿಷ್ಠೆಯ ಕೊನೆಯ ಭಾಗದಲ್ಲಿ ಬಂಗಾರದ ಸೂಜಿಯಿಂದ ಈ ಅಂಜನವನ್ನು ಮೂರ್ತಿಯ ಕಣ್ಣುಗಳಿಗೆ ಲೇಪಿಸಲಾಗುವುದು. ದೇವರ ಪೂಜೆಯಿಂದ ಹಿಡಿದು ವಾಮಾಚಾರದವರೆಗೂ ಕಾಡಿಗೆ ತನ್ನ ಪ್ರಾಧಾನ್ಯತೆಯನ್ನು ಕಾಯ್ದುಕೊಂಡಿದೆ.

ಭಾರತೀಯ ನಾರಿಯ ಪ್ರಮುಖ ಅಲಂಕಾರಿಕ ಸಾಧನವೇ ಕಾಡಿಗೆ. ಎಷ್ಟೇ ಸಿಂಗರಿಸಿಕೊಂಡರೂ ಕಣ್ಣಿಗೆ ಕಾಡಿಗೆ ಇಲ್ಲದ್ದಿದ್ದರೆ ಅದು ಅಪೂರ್ಣ. ಭಾರತೀಯ ಶೈಲಿಯ ಯಾವುದೇ ವರ್ಣಚಿತ್ರವಿರಲಿ, ಅದರಲ್ಲಿ ಜೋಡಿ ನಕ್ಷತ್ರಗಳಂತೆ ಹೊಳೆಯುವ ಕಾಡಿಗೆ ಕಣ್ಣುಗಳಿರುವುದು ಖಂಡಿತ.

ಕಣ್ಣು ದೇಹದ ಕನ್ನಡಿಯಿದ್ದಂತೆ. ನಗು, ಅಳು, ಸಿಟ್ಟು, ದುಃಖ, ಸಂತೋಷ, ಅಸಹನೆ ಮುಂತಾದ ಯಾವುದೇ ಭಾವನೆಗಳಿದ್ದರೂ ಕಣ್ಣು ಅದನ್ನು ಪ್ರತಿಫಲಿಸುತ್ತದೆ. ಅಂತಹ ಕಣ್ಣಿನ ಭಾವನೆಗಳ ಪ್ರಖರತೆಯನ್ನು ಹೆಚ್ಚಿಸುವ ಈ ಕಾಡಿಗೆ ಒಂದು ಅದ್ಭುತವೇ ಸರಿ!

ಇಷ್ಟೆಲ್ಲಾ ಯೋಚನೆ ಕೇವಲ ಒಂದು ಕಾಡಿಗೆ ಡಬ್ಬದಿಂದ ಕಾಡಿ ಮಾಯವಾಯಿತು.

**ಧನ್ವಿ ಡಿ ಸುವರ್ಣ**
ಪ್ರಥಮ ವರ್ಷ ಬಿ ಎ

## ಚುಟುಕು

ಮಾನಸಿಕರು ಹೇಳುವರು,
ಕಂಡ ಕನಸಿಗೆ, ನಡೆಯುತ್ತಿರುವ ಹಾದಿಗೂ ಸಂಬಂಧವೇ
ಇಲ್ಲವೆಂದು.
ಆದರೆ ಈ ಸಂಗತಿಯೂ ಸಾಧ್ಯವೇ??

## ಮಾಯಾಚೌಕ

| | | | | | | | | |
|---|---|---|---|---|---|---|---|---|
| | | | 4 | 6 | | | 3 | |
| 9 | 8 | | | 5 | 1 | 6 | 7 | 2 |
| | 1 | 3 | 2 | 8 | | | | |
| 1 | | | | | 3 | 2 | | 4 |
| | | 5 | 1 | 2 | | 3 | | |
| 8 | | | | 4 | | | 5 | 7 |
| | | | 6 | 9 | | 4 | 1 | |
| 4 | 2 | 9 | | | | | | 3 |
| | 6 | 1 | 7 | | 4 | | | |

## ನೆನಪಿನ ನಾಕ

ನಿನ್ನ ನೆನೆದೊಡೆ ನೋವು ಮರೆಯಾಗಿ
ನೆನಪಿನ ನಾಕದಲಿ ನಾ ಸಂಚರಿಸುವೆ |
ನೆನೆದಾಗ ನನ್ನ ನೆಪಗಳು ನೆವವೆನಿಸಿ
ನಿನ ನೋಯಿಸಿದ ನಿನ್ನೆಗಳ ನೆನೆಯುವೆ.||

ಅರಿಯದೆ ನಿತ್ಯವ ನೆನಪಾಗಿಸಿದೆ
ನೆನೆದರೆ ನಿತ್ಯವೂ ಅದೇ ಕೊರಗಿದೆ|
ನೆನಪುಗಳ ಸಾಗರದ ನಾವಿಕನಾದೆ
ಮುನ್ನಡೆಸುವವರಿಲ್ಲದೆ ದಡ ಸೇರಲಾರೆ||

ನೀ ಕೊಡುವ ಸವಿನೆನಪುಗಳ ಮತ್ತೆ ಸವಿಯುವಾಸೆ
ಗುಟ್ಟುಗಳ ಪಿಸುಗುಟ್ಟು ನಿನ್ನಾಳದ ಭಾವಗೀತೆಯಾಗುವಾಸೆ|
ದೂರಾದದು ಕನಸಾಗಿ ಮತ್ತೆ ಸೇರುವ ಆಸೆ
ನೆನಪುಗಳು ನೆನಪೊಂದೆಯಾಗದೆ ನನಸಾಗಬೇಕೆಂದಾಸೆ||

ನೆನಪುಗಳ ಸಿಹಿಯೆಂದೆನಿಸಿದ್ದೆ
ಸಿಹಿ ದೂರದಲಿರೆ ಸವಿ ತಿಳಿದೂ ಸ್ವಾಧವಿಲ್ಲವೆಂದು ತಿಳಿಸಿದೆ |
ನನಗನಿಸಿದೆ ನಿನಗೂ ನೆನಪಿದೆಯೆಂದು
ಮತ್ತೆ ಜೀವನದಿ ನೆನಪ ಹರಿಸ ಬರುವೆಯೆಂದು ಕಾದಿಹೆ.||

**- ಸುಶ್ಮಿತಾ ಬಿ. ಆರ್.**

## ಕಿರುಗವನ

೧. ಇದ್ದರೆ ಇರಬೇಕು ಇಲ್ಲದಿದ್ದರೂ ಇದ್ದಂತೆ,
ಇದ್ದರೆ ಇರಬಾರದು ಇದ್ದರೂ ಇಲ್ಲದಂತೆ.

೨. ಮೌನದ ಧ್ವನಿಯೊಂದು ಮಾತಾದಾಗ,
ಮಾತಿನ ಸ್ವರವೊಂದು ಮೌನವಾದಾಗ,
ಮೌನದ ಮಾತೊಂದು ಎಚ್ಚೆತ್ತಾಗ,
ಮಾತೊಂದು ಹಾಡಿತು ಮೌನರಾಗ...

**ಸಹನ**
ತೃತೀಯ ಬಿಸಿಎ

# ಪದಗಳಂಗಳ

| | | | | | | | | |
|---|---|---|---|---|---|---|---|---|
| 1. | | 2. | ■ | ■ | 3. | ■ | 4. | 5. |
| | ■ | 6. | | | | ■ | ■ | |
| | ■ | | ■ | ■ | ■ | 7. | 8. | |
| ■ | ■ | 9. | | 10. | | ■ | | ■ |
| 11. | | ■ | ■ | | ■ | 12. | | |
| ■ | ■ | 13. | | | | | ■ | ■ |
| 14. | | | ■ | | ■ | | ■ | 15. |
| | ■ | ■ | 16. | | ■ | 17. | 18. | |
| 19. | | | | ■ | ■ | ■ | | ■ |

**ಎಡದಿಂದ ಬಲಕ್ಕೆ**

1. ನರರಿರುವ ಪಟ್ಟಣ (3)
4. ಸುವಾಸನೆಯನ್ನು ಎರಡಕ್ಷರದಲ್ಲಿ ಹೇಳಿದಾಗ (2)
6. ಕರ್ನಾಟಕದ ಪಶ್ಚಿಮ ಘಟ್ಟಗಳು (4)
7. ಯುದ್ಧದಲ್ಲಿ ಮರವು ಕಾಣುತಿದೆಯಲ್ಲಾ (3)
9. ಕೃಷ್ಣನ ಕುಲವಿದು (4)
11. ವಿಧವನ್ನು ಹೀಗೂ ಎನ್ನಬಹುದು (2)
12. ಸಾಂಪ್ರದಾಯಿಕ ವ್ಯಾಯಾಮ ಶಾಲೆ (3)
13. ನೆಲಮಟ್ಟಕ್ಕೆ ಹತ್ತಿರವಿರುವ ಕಟ್ಟಡದ ಮಹಡಿ (5)
14. ಈ ಬಿದಿರಿನ ಚಿಗುರು ಮಲೆನಾಡು ಮತ್ತು ಕರಾವಳಿಯ ವಿಶೇಷ ಖಾದ್ಯ (3)
16. ಕುಶಲತೆಯಿದು (2)
17. ರನ್ನನ ನೆಚ್ಚಿನ ಕಾವ್ಯ ಛಂದಸ್ಸು, ಕೆಲವರಿಗೆ ಕಿರಿಕಿರಿ (3)
19. ಸರವನ್ನು ಕಂಡಾಗ ಆದ ಖುಷಿ (4)

**ಮೇಲಿಂದ ಕೆಳಕ್ಕೆ**

1. ನಲಿಯುತಿರುವ ಮಯೂರಿ (3)
2. ರಮಣನು ಚೆಲುವನ್ನು ವರ್ಣಿಸಿದ ಬಗೆ (4)
3. ಕಾಣನವನ್ನು ಹೀಗೆನ್ನಬಹುದು (2)
5. ಮರವನ್ನು ಕಂಡಾಗ ಉಂಟಾದ ಹಿತ (3)
8. ವಕ್ರೀಭವನದ ಮೂಲಕ ಬೆಳಕಿನ ಕಿರಣವನ್ನು ಈ ಸಾಧನದ ಮೂಲಕ ರವಾನಿಸುವರು (3)
10. ದೇವನೂರು ಮಹಾದೇವರ ಕುಸುಮಳ ಕುರಿತಾದ ಕಾದಂಬರಿ (5)
12. ಗಡಿಯಲ್ಲೂ ಸಮಯ ಇದರಿಂದ ತಿಳಿಯಿತು (4)
13. ಬೀಡನ್ನು ಹೀಗೂ ಕರೆಯಬಹುದು (2)
14. ಕಲಶ ಎಂಬ ಸಂಸ್ಕೃತ ಶಬ್ದದ ಮೂಲದಿಂದ ಬಂದ ಚಿಕ್ಕಮಗಳೂರಿನ ಈ ತಾಲ್ಲೂಕಿನ ಹೆಸರು (3)
15. ಬೆಳೆಯ ನಡುವೆ ಬೆಳೆದಿದ್ದು (2)
16. ತೆರಿಗೆಯನ್ನು ಕೈಯಿಂದ ಕೊಡಬೇಕಲ್ಲವೇ (2)
18. ಸರಹದ್ದು ಇದು (2)

---

"ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ದೊರೆಯಲಿ ಎಂದಾಕ್ಷಣ ಬೇರೆಯವರಿಗೆ ಸ್ಥಾನವೇನಿಲ್ಲ ಎಂದಲ್ಲ. ನಮ್ಮಲ್ಲಿಗೆ ಬೇರೆಯವರು ಬರಲಿ, ಅತಿಥಿಯಾಗಿ ಬರಲಿ, ಯಜಮಾನರಾಗಿ ಅಲ್ಲ."

**- ಕುವೆಂಪು**

## ಮೊದಲುಗಳು

೧. ಕರ್ನಾಟಕದಲ್ಲಿ ಪ್ರಪ್ರಥಮವಾಗಿ ವಿದ್ಯುತ್ ಸಂಪರ್ಕ ಪಡೆದ ನಗರ ಯಾವುದು?
೨. ಕರ್ನಾಟಕದ ಪ್ರಥಮ ಭೂಗರ್ಭ ವಿದ್ಯುದಾಗಾರ ಯಾವುದು?
೩. ಕನ್ನಡದ ಪ್ರಥಮ ಸಣ್ಣ ಕಥೆ ಯಾವುದು?
೪. ಕನ್ನಡದ ಮೊದಲ ಗದ್ಯ ಕೃತಿ ಯಾವುದು?
೫. ಕರ್ನಾಟಕ ರತ್ನ ಪ್ರಶಸ್ತಿ ಪಡೆದ ಮೊದಲ ವ್ಯಕ್ತಿ ಯಾರು?

# ಚೆನ್ನಭೈರಾದೇವಿ - ಭಾರತದ ಮೆಣಸಿನ ರಾಣಿ

**ಎಲೆ ಮರೆ ಕಾಯಿ**

16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಅಡಿಯಲ್ಲಿ ನಾಗೇರೆ ಪ್ರಾಂತ್ಯವನ್ನು ಆಳಿದ ಜೈನ ರಾಣಿ ಚೆನ್ನಭೈರದೇವಿ, ಭಾರತದ ಇತಿಹಾಸದಲ್ಲಿ ಅತ್ಯಂತ ದೀರ್ಘಕಾಲ ಆಳ್ವಿಕೆ ನಡೆಸಿದ ಮಹಿಳಾ ಆಡಳಿತಗಾರ್ತಿಯಾಗಿದ್ದರು. ತಮ್ಮ 54 ವರ್ಷಗಳ ಆಳ್ವಿಕೆಯಲ್ಲಿ ಅವರು ತೋರಿದ ಸಾಮರ್ಥ್ಯ, ಧೈರ್ಯ ಮತ್ತು ಬುದ್ಧಿವಂತಿಕೆಯಿಂದ ಇತಿಹಾಸದಲ್ಲಿ ಅಮರರಾಗಿದ್ದಾರೆ.

**ಚೆನ್ನಭೈರಾದೇವಿ ಅವರ ಆಳ್ವಿಕೆಯು ಭಾರತದ ಇತಿಹಾಸದಲ್ಲಿ ಒಂದು ಪ್ರಮುಖ ಅಧ್ಯಾಯವಾಗಿದೆ. ಅವರು ತಮ್ಮ ಸಾಮರ್ಥ್ಯ, ಧೈರ್ಯ ಮತ್ತು ಬುದ್ಧಿವಂತಿಕೆಯಿಂದ ಇತಿಹಾಸದಲ್ಲಿ ಅಮರರಾಗಿದ್ದಾರೆ. ಅವರ ಆಳ್ವಿಕೆಯು ನಮಗೆ ಸ್ಫೂರ್ತಿಯಾಗಿದೆ.**

ಪೋರ್ಚುಗೀಸರು ಚೆನ್ನಭೈರಾದೇವಿಯನ್ನು "ರೈನಾ-ಡಾ-ಪಿಮೆಂಟಾ" ಅಥವಾ "ಮೆಣಸಿನ ರಾಣಿ" ಎಂದು ಕರೆದರು. ನಾಗೇರೆ ಪ್ರಾಂತ್ಯವು ಮೆಣಸು ಸೇರಿದಂತೆ ವಿವಿಧ ಮಸಾಲೆಗಳ ಉತ್ಪಾದನೆಗೆ ಹೆಸರುವಾಸಿಯಾಗಿತ್ತು. ಹೊನ್ನಾವರ ಮತ್ತು ಭಟ್ಕಳ ಬಂದರುಗಳ ಮೂಲಕ ಈ ಮಸಾಲೆಗಳನ್ನು ಯೂರೋಪ್ ಸೇರಿದಂತೆ ವಿವಿಧ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಮೆಣಸು ವ್ಯಾಪಾರವು ನಾಗೇರೆ ಪ್ರಾಂತ್ಯದ ಆರ್ಥಿಕ ಸಮೃದ್ಧಿಗೆ ಪ್ರಮುಖ ಕೊಡುಗೆ ನೀಡಿತು.
ಪೋರ್ಚುಗೀಸರು ಮೆಣಸು ವ್ಯಾಪಾರದ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸಿದರು. ಆದರೆ ಚೆನ್ನಭೈರಾದೇವಿ ಅವರ ಧೈರ್ಯ ಮತ್ತು ಸಾಮರ್ಥ್ಯದಿಂದ ಅವರ ಪ್ರಯತ್ನಗಳು ವಿಫಲವಾದವು. ಅವರು ಪೋರ್ಚುಗೀಸರ ವಿರುದ್ಧ ಎರಡು ಬಾರಿ ಯುದ್ಧ ಮಾಡಿ ಗೆದ್ದರು. ಇದರಿಂದಾಗಿ ನಾಗೇರೆ ಪ್ರಾಂತ್ಯದ ಸ್ವಾತಂತ್ರ್ಯ ಮತ್ತು ಮೆಣಸು ವ್ಯಾಪಾರ ರಕ್ಷಿಸಲ್ಪಟ್ಟಿತು.


ಚೆನ್ನಭೈರಾದೇವಿ ಕೇವಲ ಯುದ್ಧ ಕೌಶಲ್ಯದಲ್ಲಿ ಮಾತ್ರವಲ್ಲದೆ ಆಡಳಿತ ಕೌಶಲ್ಯದಲ್ಲೂ ಪರಿಣತರಾಗಿದ್ದರು. ಅವರು ತಮ್ಮ ಪ್ರಜೆಗಳ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರು. ಅವರ ಆಳ್ವಿಕೆಯಲ್ಲಿ ನಾಗೇರೆ ಪ್ರಾಂತ್ಯವು ಶಾಂತಿ, ಸಮೃದ್ಧಿ ಮತ್ತು ಸುರಕ್ಷತೆಯನ್ನು ಕಂಡಿತು.



ಚೆನ್ನಭೈರಾದೇವಿ ಅವರು ಸಮುದ್ರಾಕ್ರಮಣದಿಂದ ರಕ್ಷಿಸಿಕೊಳ್ಳಲು ಮಿರ್ಜಾನ್ ಕೋಟೆಯನ್ನು ನಿರ್ಮಿಸಿದರು ಮತ್ತು ಎಲ್ಲಾ ಧರ್ಮಗಳನ್ನು ಗೌರವಿಸಿದರು. ಮೆಣಸು ವ್ಯಾಪಾರವು ನಾಗೇರೆ ಪ್ರಾಂತ್ಯದ ಆರ್ಥಿಕ ಸಮೃದ್ಧಿಗೆ ಪ್ರಮುಖ ಕೊಡುಗೆ ನೀಡಿತು. ಚೆನ್ನಭೈರಾದೇವಿ ತಮ್ಮ ಸಮರ್ಥ ಆಡಳಿತದ ಮೂಲಕ ವ್ಯಾಪಾರವನ್ನು ಉತ್ತೇಜಿಸಿದರು ಮತ್ತು ಸುರಕ್ಷಿತ ವ್ಯಾಪಾರ ಮಾರ್ಗಗಳನ್ನು ಒದಗಿಸಿದರು. ಇದರಿಂದಾಗಿ ನಾಗೇರೆ ಸಾಮ್ರಾಜ್ಯವು ಸಂಪತ್ತನ್ನು ಗಳಿಸಿತು ಮತ್ತು ಅಭಿವೃದ್ಧಿಯ ಪಥದಲ್ಲಿ ಸಾಗಲು ಸಾಧ್ಯವಾಯಿತು.

**-ಸುಜ್ಞಾನ ಮೂರ್ತಿ ಜಿ ಎಂ**
೩ನೇ ವರ್ಷದ ಬಿಸಿಎ ವಿದ್ಯಾರ್ಥಿ

## ಕಲಾಮಂಜರಿ





**ಅನ್ವಿತ**
ದ್ವಿತೀಯ ಬಿ ಎ



**ಭರತ್ ಜಿ**
ದ್ವಿತೀಯ ಬಿಬಿಎ